ಡಿ ಎಸ್ ಇ ಆರ್ ಟಿ
DSERT

# ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
# DEPARTMENT OF STATE EDUCATION RESEARCH AND TRAINING

NO 4, 100 FT RING ROAD, BANASHANKARI 3RD STAGE
BANGALORE 560 085

TEL NO: 26422372
26422373

E MAIL: http://dsert.kar.nic.in

www.dsert.kar.nic.in

ಸಂಖ್ಯೆ: ಎನ್.ಟಿ.ಎಸ್.ಇ/ಎನ್.ಎಂ.ಎಂ.ಎಸ್/ಸಾ.ಪ.ವ್ಯ/18/2011-12 ದಿನಾಂಕ : 8-8-2011

## ಸುತ್ತೋಲೆ

8ನೇ ತರಗತಿ ವಿದ್ಯಾರ್ಥಿಗಳಿಗಾಗಿ 2011-12 ನೇ ಸಾಲಿನ ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆ (National Talent Search Examination, NTSE) ಹಾಗೂ ನ್ಯಾಷನಲ್ ಮೀನ್ಸ್-ಕಮ್-ಮೆರಿಟ್ ಸ್ಕಾಲರ್ಷಿಪ್ ಯೋಜನೆ ಪರೀಕ್ಷೆ (National Means Cum Merit Scholarship, NMMS) ದಿನಾಂಕ 20-11-2011 ರಂದು ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ನಡೆಯಲಿದೆ. ಈ ಸಂಬಂಧ ಕೆಳಗಿನ ಸೂಚನೆಗಳನ್ನು ಗಮನಿಸಿ ತಪ್ಪದೇ ಅನುಸರಿಸುವುದು.

- NTSE ಮತ್ತು NMMS ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿಯನ್ನು, ರೂಪು-ರೇಷೆಗಳನ್ನು/ವ್ಯತ್ಯಾಸಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವುದು.
- ಕರ್ನಾಟಕಕ್ಕೆ NMMS ಯೋಜನೆ ಅಡಿಯಲ್ಲಿ 5,534 ವಿದ್ಯಾರ್ಥಿವೇತನವಿದ್ದು, ಪ್ರತಿ ವರ್ಷ ಕೇವಲ ಎರಡರಿಂದ ಮೂರು ಸಾವಿರ ಮಕ್ಕಳು ಮಾತ್ರ ಪಡೆಯುತ್ತಿದ್ದಾರೆ. ಅದಕ್ಕೆ ಕಾರಣ ಕಡಿಮೆ ಮಕ್ಕಳು ಈ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿರುವುದು. ಆದಕಾರಣ ನಿಮ್ಮ ವ್ಯಾಪ್ತಿಯ ಎಲ್ಲಾ ಪ್ರೌಢಶಾಲೆಗಳಿಗೆ ಮಾಹಿತಿ ನೀಡಿ, ಮುಖ್ಯೋಪಾಧ್ಯಾಯರ ಸಭೆ ನಡೆಸಿ ಪ್ರತಿ ಶಾಲೆಯಿಂದ ಹೆಚ್ಚಿನ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯುವಂತೆ ಮಾಡುವುದು.
- ಈ ಯೋಜನೆಗಳ ಪ್ರಚಾರಕ್ಕೆ ಸ್ಥಳೀಯ ಸುದ್ದಿ ಮಾಧ್ಯಮಗಳನ್ನು ಬಳಸಿಕೊಳ್ಳುವುದು.
- ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವ ಸಲುವಾಗಿ NTSE ಮತ್ತು NMMS ಅರ್ಜಿ ನಮೂನೆಗಳನ್ನು (ಸೂಚನೆಗಳು ಹಾಗೂ ವಿವರಣಾ ಪತ್ರ ಸೇರಿ) DSERT ವತಿಯಿಂದ ಮುದ್ರಿಸಿ ದಿನಾಂಕ 16-08-2011 ರೊಳಗೆ ಸರಬರಾಜು ಮಾಡಲಾಗುವುದು. ಅರ್ಜಿ ನಮೂನೆಗಳು ವೆಬ್‌ಸೈಟ್ ವಿಳಾಸದಲ್ಲೂ www.dsert.kar.nic.in ಲಭ್ಯವಿದೆ.
- ಅರ್ಜಿ ನಮೂನೆಗಳನ್ನು ತಾವು ಕೂಲಂಕುಶವಾಗಿ ಗಮನಿಸಿ ಅರ್ಥಮಾಡಿಕೊಳ್ಳುವುದು. ದಿನಾಂಕ 17-08-2011 ರಿಂದ ಅರ್ಜಿಗಳನ್ನು ವಿತರಿಸುವುದು.
- ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ NTSE ಮತ್ತು NMMS ಪರೀಕ್ಷೆಗೆ ಕನಿಷ್ಠ 250 ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಕೂರಿಸಬೇಕು. ಒಂದು ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 999 ಮೀರಿದಲ್ಲಿ ವಿದ್ಯಾರ್ಥಿಗಳಿಗೆ ನೋಂದಣಿ ಸಂಖ್ಯೆ ನೀಡಲು ಆ ಪರೀಕ್ಷಾ ಕೇಂದ್ರದ ಮುಖ್ಯಸ್ಥರು **ಶ್ರೀ ಎಂ.ವಿ. ಕೃಷ್ಣಮೂರ್ತಿ, ಹಿರಿಯ ಸಹಾಯಕ ನಿರ್ದೇಶಕರು (NTSE ವಿಭಾಗ) ರವನ್ನು ಸಂಪರ್ಕಿಸುವುದು.**
- NTSE ಪರೀಕ್ಷೆಗೆ ಅರ್ಜಿ ಶುಲ್ಕವಿರುವುದಿಲ್ಲ. ಪರೀಕ್ಷಾ ಶುಲ್ಕ ರೂ.25.00 ಮಾತ್ರ ಪಡೆಯುವುದು. (SC ಮತ್ತು ST ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವೂ ಇರುವುದಿಲ್ಲ)
- NMMS ಪರೀಕ್ಷೆಗೆ ಅರ್ಜಿ ಶುಲ್ಕವಾಗಲೀ ಪರೀಕ್ಷಾ ಶುಲ್ಕವಾಗಲೀ ಇರುವುದಿಲ್ಲ. ಸಂಪೂರ್ಣ ಉಚಿತ
- ಎರಡೂ ಪರೀಕ್ಷೆಗಳಿಗೆ ಪ್ರತ್ಯೇಕ ಅರ್ಜಿ ನಮೂನೆಗಳಿದ್ದು. ಆಯಾ ಪರೀಕ್ಷೆಗೆ ನಿಗಧಿ ಪಡಿಸಿದ ಅರ್ಜಿ ನಮೂನೆಗಳನ್ನು ಮಾತ್ರ ಬಳಸಬೇಕು.

- NTSE/NMMS ಎರಡೂ ಪರೀಕ್ಷೆಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಅರ್ಜಿ ನಮೂನೆಗಳನ್ನು ವಿತರಿಸುವುದು. NMMS ಪರೀಕ್ಷೆಗೆ ಸರ್ಕಾರಿ ಹಾಗೂ ಅನುದಾನಿತ ಶಾಲೆಯ ಮಕ್ಕಳು ಮಾತ್ರ ಅರ್ಹರಾಗಿರುತ್ತಾರೆ.
- NTSE ಮತ್ತು NMMS ಪರೀಕ್ಷಾ ಅರ್ಜಿ ನಮೂನೆಗಳ ಕೊರತೆ ಕಂಡು ಬಂದಲ್ಲಿ ಪ್ರತಿ (XEROX copy) ಬಳಸಬಹುದು.
- ಮೂಲ ಪ್ರತಿಯಾಗಲಿ, ಜೆರಾಕ್ಸ್ ಪ್ರತಿಯಾಗಲಿ, ಅಥವಾ ವೆಬ್‌ಸೈಟ್ ವಿಳಾಸದಿಂದ ಪಡೆದ NCERT/DSERT ಪ್ರತಿಯಾದರೂ ಸ್ವೀಕರಿಸಬಹುದು. NTSE ತುಂಬಿದ ಅರ್ಜಿ ಪಡೆಯುವಾಗ ಪರೀಕ್ಷಾ ಶುಲ್ಕ ಪಡೆಯುವುದು.
- ಪುಟ ಸಂಖ್ಯೆ 5 ರಲ್ಲಿರುವ ಪ್ರವೇಶ ಪತ್ರ (Admission Card) ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಒಂದು ವಾರದ ಮುನ್ನ ನೀಡಬೇಕು ಒಂದು ನಕಲು ಪ್ರತಿಯನ್ನು ನೀವು ಇಟ್ಟುಕೊಳ್ಳುವುದು.
- ಪ್ರವೇಶ ಪತ್ರದ ನೊಂದಣಿ ಸಂಖ್ಯೆಯನ್ನು NTSE ಮತ್ತು NMMS ಪರೀಕ್ಷೆಗೆ ಪ್ರತ್ಯೇಕವಾಗಿ ನೀಡಬೇಕು. NTSE ಹಾಗೂ NMMS ಪರೀಕ್ಷೆಗೆ ಪ್ರತ್ಯೇಕವಾಗಿ 001 ರಿಂದ ನೊಂದಣಿ ಸಂಖ್ಯೆ ಪ್ರಾರಂಭಿಸಬೇಕು. ಉದಾ: NTSE ಪರೀಕ್ಷೆ ವಿದ್ಯಾರ್ಥಿಗಳಿಗೆ 14111+ ತಾ: ಪರೀಕ್ಷಾ ಕೇಂದ್ರದ ಸಂಕೇತ 4 ಅಂಕಿಗಳು + ವಿದ್ಯಾರ್ಥಿ ನೋಂದಣಿ ಸಂಖ್ಯೆ 3 ಅಂಕಿಗಳು ಒಟ್ಟು 12 ಅಂಕಿಗಳು. NMMS ಪರೀಕ್ಷೆ ವಿದ್ಯಾರ್ಥಿಗಳಿಗೆ 24111+ ತಾ: ಪರೀಕ್ಷಾ ಕೇಂದ್ರದ ಸಂಕೇತ 4 ಅಂಕಿಗಳು + ವಿದ್ಯಾರ್ಥಿ ನೋಂದಣಿ ಸಂಖ್ಯೆ 3 ಅಂಕಿಗಳು ಒಟ್ಟು 12 ಅಂಕಿಗಳು. ನೋಂದಣಿ ಸಂಖ್ಯೆ (Roll No) ಕಡ್ಡಾಯ.
- NTSE ಪರೀಕ್ಷಾ ಶುಲ್ಕವನ್ನು ಡಿ.ಡಿ, ಪೋಸ್ಟಲ್ ಆರ್ಡ್‌ರ್ ಅಥವಾ ನಗದಾಗಿಯೂ ಪಡೆಯಬಹುದು. ಭರ್ತಿ ಮಾಡಿದ **ಅರ್ಜಿಗಳನ್ನು ಶಾಲಾ ಮುಖ್ಯಸ್ಥರ ಮೂಲಕ ನೀವು ಪಡೆಯಲು ದಿನಾಂಕ 12-09-2011 ಕೊನೆಯ ದಿನವಾಗಿರುತ್ತದೆ.**
- ಅಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ ನಮುನೆಗಳನ್ನು ನಿಮ್ಮ ಹಂತದಲ್ಲೇ ತಿರಸ್ಕರಿಸುವುದು. ಅರ್ಜಿಯ ಎಲ್ಲಾ ಅಂಶಗಳನ್ನು ಭರ್ತಿ ಮಾಡಿರಬೇಕು. ಅರ್ಜಿಯಲ್ಲಿರುವ ಅನೇಕ ಮಾಹಿತಿಗಳನ್ನು ಕ್ರೋಢಿಕರಿಸಬೇಕಾಗಿರುವುದರಿಂದ ಯಾವ ಮಾಹಿತಿಯನ್ನು ಬಿಡುವಂತಿಲ್ಲ.
- ದಿನಾಂಕ 12-09-2011 ರವರೆಗೆ ಬಂದಂತಃ ಅರ್ಜಿಗಳ ಆಧಾರದ ಮೇಲೆ NTSE ಹಾಗೂ NMMS ಪರೀಕ್ಷಾರ್ಥಿಗಳ ನಾಮಯಾದಿಯನ್ನು (Nominal Role) ಆಂಗ್ಲಭಾಷಾ ಅಕ್ಷರಾನುಕ್ರಮವಾಗಿ ತಯಾರಿಸಿ (ನಮೂನೆ-1ನ್ನು ನೋಡಿ) ಆಯಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳು ದೃಢೀಕರಿಸಿ ಸಂಬಂಧಿಸಿದ DIET ಗಳಿಗೆ ಸಲ್ಲಿಸುವುದು.
- NTSE ಮತ್ತು NMMS ಪರೀಕ್ಷಾರ್ಥಿಗಳ ನಾಮಯಾದಿ ಪ್ರತ್ಯೇಕವಾಗಿ ದ್ವಿಪ್ರತಿಯಲ್ಲಿ ತಯಾರಿಸಿ, (ನಮೂನೆ-1 ರಂತೆ) ಒಂದು ಮೂಲ ಪ್ರತಿಯನ್ನು ದಿನಾಂಕ: 30-09-2011 ರೊಳಗೆ ತಪ್ಪದೇ ಸಂಬಂಧಿಸಿದ ಡಯಟ್‌ಗೆ ಕಳುಹಿಸುವುದು. ನಾಮಯಾದಿಯಲ್ಲಿ caste (ವರ್ಗ) ಕಾಲಂನಲ್ಲಿ ಜಾತಿಯ ಜೊತೆಗೆ ಆವರಣದಲ್ಲಿ SC, ST, GM, 1(A), 2(A) 2(B), 3(A), 3(B) ಯಾವುದೆಂದು ಕಡ್ಡಾಯವಾಗಿ ನಮೂದಿಸುವುದು. ನಾಮಯಾದಿ ಕೊನೆಯಲ್ಲಿ ಘೋಷ್ವಾರೆ ನೀಡುವುದು ಕಡ್ಡಾಯ. ಅದರಲ್ಲಿ ನೀವು ನೀಡುವ ಮಾಹಿತಿಯೇ ಅಂತಿಮ ಎಂದು ಭಾವಿಸಲಾಗುತ್ತದೆ. ಬದಲಾವಣೆಗೆ ಅವಕಾಶವಿಲ್ಲ. ನಾಮಯಾದಿಯಲ್ಲಿರುವ 12 ಅಂಕಿಗಳ ನೊಂದಣಿ ಸಂಖ್ಯೆಯನ್ನು ವಿದ್ಯಾರ್ಥಿಯ ಪ್ರವೇಶ ಪತ್ರದಲ್ಲಿ ನಮೂದಿಸಬೇಕು.

- ನಿಮ್ಮ ಪರೀಕ್ಷಾ ಕೇಂದ್ರದ NTSE ಮತ್ತು NMMS ಪರೀಕ್ಷೆಗಳ ಭರ್ತಿ ಮಾಡಿದ ಅರ್ಜಿಗಳನ್ನು (ಅರ್ಜಿ ನಮೂನೆಯ ಮೊದಲ ನಾಲ್ಕು ಪುಟಗಳು ಮಾತ್ರ) ಪ್ರತ್ಯೇಕವಾಗಿ ಬಂಡಲ್ ಮಾಡಿ ದಿನಾಂಕ: **30–09–2011 ರೊಳಗೆ ಸಂಬಂಧಿಸಿದ ಡಯಟ್ ಗಳಿಗೆ ಕಳುಹಿಸುವುದು.**
- ಪರೀಕ್ಷಾ ಕೇಂದ್ರದ ಸಂಕೇತ ಹಾಗೂ ವಿದ್ಯಾರ್ಥಿ ನೊಂದಣಿ ಸಂಖ್ಯೆ ಸೇರಿ ಒಟ್ಟು ಹನ್ನೆರಡು (12) ಅಂಕಿಗಳ ನೊಂದಣಿ ಸಂಖ್ಯೆ ನೀಡುವುದು ಕಡ್ಡಾಯ. ಅರ್ಜಿಯಲ್ಲಿ ಪರೀಕ್ಷಾ ಕೇಂದ್ರದ ಸಂಕೇತ ನೀಡಲಾಗಿದೆ.
- ವಿದ್ಯಾರ್ಥಿಗಳಿಂದ ಪಡೆದ ಪರೀಕ್ಷಾ ಶುಲ್ಕವನ್ನು ಕ್ರೋಢಿಕರಿಸಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು ರವರ ಹೆಸರಿಗೆ ಬ್ಯಾಂಕ್ ಹುಂಡಿ ತೆಗೆದು ನಮೂನೆ–2ರಲ್ಲಿ ಮಾಹಿತಿ ತುಂಬಿ ತಪ್ಪದೇ **ದಿನಾಂಕ 30–09–2011 ರೊಳಗೆ ಕಳುಹಿಸುವುದು. ವಿದ್ಯಾರ್ಥಿಗಳಿಂದ ಬಂದಂತಹ ಡಿ.ಡಿ. ಪೋಸ್ಟಲ್ ಆರ್ಡರ್‌ಗಳನ್ನು** ನೇರವಾಗಿ ನಮಗೆ ಕಳುಹಿಸಬಾರದು. ಪರೀಕ್ಷೆ ನಡೆಸಲು ತಗಲುವ ಖರ್ಚನ್ನು ಪ್ರಶ್ನೆಪತ್ರಿಕೆ ಸರಬರಾಜು ಮಾಡುವ ಸಂದರ್ಭದಲ್ಲಿ ವಿತರಿಸಲಾಗುವುದು. ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ಯಾವುದೇ ಕಾರಣಕ್ಕೆ ನಿಮ್ಮ ಬಳಿ ಇಟ್ಟುಕೊಳ್ಳುವಂತಿಲ್ಲ.
- ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆ–2ನ್ನು ಸೂಕ್ತ ಮಾಹಿತಿಯೊಂದಿಗೆ ಭರ್ತಿ ಮಾಡಿ ದಿನಾಂಕ 30–09–2011 ರೊಳಗೆ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು.

  **ಡಾ: ಎಂ.ವಿ. ಕೃಷ್ಣಮೂರ್ತಿ ಹಿರಿಯ ಸಹಾಯಕ ನಿರ್ದೇಶಕರು (NTSE ವಿಭಾಗ) ನಂ.4, 100 ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು – 85.**
- NTSE ಮತ್ತು NMMS ಪರೀಕ್ಷೆಗಳ ಬಗ್ಗೆ ಸ್ಥಳೀಯವಾಗಿ ಕೈಗೊಂಡ ಕ್ರಮಗಳ ಹಾಗೂ ಪ್ರಚಾರ ಕೈಗೊಂಡ ಪ್ರತಿಗಳನ್ನು ನಮಗೆ ಕಳುಹಿಸುವುದು. ವಿದ್ಯಾರ್ಥಿಗಳಿಂದ ಸಂಗ್ರಹವಾದ ಹಣವನ್ನು ಪ್ರಚಾರಕ್ಕೆ ಬಳಸಬಾರದು.
- ವಿದ್ಯಾರ್ಥಿಗಳು/ ಪೋಷಕರು/ ಶಾಲೆಯವರು ಯಾವುದೇ ಕಾರಣಕ್ಕೆ ಅರ್ಜಿಗಳನ್ನಾಗಲೀ ಅಥವಾ ಡಿ.ಡಿ.ಗಳನ್ನಾಗಲಿ ನೇರವಾಗಿ ಡಿ.ಎಸ್.ಇ.ಆರ್.ಟಿ. ಗೆ ಕಳುಹಿಸಬಾರದು, ಕಳುಹಿಸಿದ ಪಕ್ಷದಲ್ಲಿ ನಾವು ಜವಾಬ್ದಾರರಲ್ಲ. ಪರೀಕ್ಷಾ ಕೆಲಸಗಳಿಗೆ ಸಂಬಂಧಿಸಿದಂತೆ ಇನ್ನೊಂದು ಸುತ್ತೋಲೆಯನ್ನು ನಂತರ ನೀಡಲಾಗುವುದು.
- ಹೆಚ್ಚಿನ ಯಾವುದೇ ಮಾಹಿತಿಗೆ ಡಾ: ಎಂ.ವಿ. ಕೃಷ್ಣಮೂರ್ತಿ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ. ಇವರನ್ನು ದೂರವಾಣಿ ಸಂಖ್ಯೆ: 26422372, 26422373, 26422374 ವಿಸ್ತರಣಾ ಸಂಖ್ಯೆ 305 ನ್ನು ಸಂಪರ್ಕಿಸುವುದು ಅಥವಾ ಸಂಬಂಧಿಸಿದ ಡಯಟ್ ನ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು.

**ನಿರ್ದೇಶಕರು**

**(ಸಂ ಮತ್ತು ತ)**

**<u>ಪ್ರತಿಗಳು :</u>**

1. ಉಪನಿರ್ದೇಶಕರು, (ಆಡಳಿತ) ಎಲ್ಲಾ ಜಿಲ್ಲೆಗಳು.
2. NTSE /NMMS ನೋಡಲ್ ಅಧಿಕಾರಿಗಳು, ಎಲ್ಲಾ ಡಯಟ್‌ಗಳು.

**ನಮೂನೆ-2**

**(30/09/2010 ರೊಳಗೆ ಡಿ.ಎಸ್.ಇ.ಆರ್.ಟಿ ಗೆ ಸಲ್ಲಿಸಬೇಕು)**

1) ಪರೀಕ್ಷಾ ಕೇಂದ್ರದ ಹೆಸರು ಮತ್ತು ವಿಳಾಸ :

2)ಪರೀಕ್ಷಾ ಕೇಂದ್ರದ ಸಂಕೇತ :

3)ಮುಖ್ಯ ಅಧೀಕ್ಷಕರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ :

4)ಪರೀಕ್ಷಾ ಕೇಂದ್ರದಲ್ಲಿ ನೊಂದಾಯಿಸಿದ ವಿದ್ಯಾರ್ಥಿಗಳ ಸಂಖ್ಯೆ:

ಎನ್.ಟಿ.ಎಸ್.ಇ. :

ಎನ್.ಎಂ.ಎಂ.ಎಸ್. :

ಒಟ್ಟು :

**ಅರ್ಜಿ ವಿತರಣೆ ಹಾಗೂ ಸಂಗ್ರಹವಾದ ಪರೀಕ್ಷಾ ಶುಲ್ಕದ ವಿವರ**

| ಕ್ರ. ಸಂ. | ವಿತರಣೆಯಾದ ಅರ್ಜಿಗಳು | | | | | | | ಸಂಗ್ರಹವಾದ ಪರೀಕ್ಷಾ ಶುಲ್ಕ | | |
|---|---|---|---|---|---|---|---|---|---|---|
| | | ಸರಬರಾಜಾದ ಅರ್ಜಿಗಳು | ಎಸ್.ಸಿ | ಎಸ್.ಟಿ. | ಸಾಮಾನ್ಯ | ಒಟ್ಟು | ಉಳಿಕೆ ಅರ್ಜಿಗಳು | ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಸಂಖ್ಯೆ | ಒಬ್ಬರಿಗೆ ರೂ.25.00 | ಒಟ್ಟು ರೂ. |
| 1 | NTSE | | | | | | | | | |
| 2 | NMMS | | | | | | | | ಇಲ್ಲ | ಇಲ್ಲ |

ಮುಖ್ಯ ಅಧೀಕ್ಷಕರು

## ನಮೂನೆ–1 ನಾಮಯಾದಿ (Nominal Roll)

(NTSE ಮತ್ತು NMMS ಪರೀಕ್ಷೆಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಸಿದ್ಧಪಡಿಸಬೇಕು)

(ನಾಮಯಾದಿಗಳನ್ನು ಡಯಟ್ ಗೆ ಸಲ್ಲಿಸಬೇಕು)

1) ಪರೀಕ್ಷಾ ಕೇಂದ್ರದ ಸಂಕೇತ :

2) ಪರೀಕ್ಷಾ ಕೇಂದ್ರದ ಹೆಸರು ಮತ್ತು ವಿಳಾಸ :

| ಕ್ರ. ಸಂ. | ನೋಂದಣಿ ಸಂಖ್ಯೆ | ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಶಾಲೆಯ ವಿಳಾಸ | ವರ್ಗ | ವಾರ್ಷಿಕ ವರಮಾನ | ಮಾಧ್ಯಮ | ಶಾಲೆಯ ವಿಧ | ವಿ.ಸಂಪರ್ಕ ದೂ.ಸಂಖ್ಯೆ. |
|---|---|---|---|---|---|---|---|---|---|
| Sl. No. | Roll.No (12 digits) | Name of the Student | Father's Name | School Address | Caste | Annual Income | Mediam K/E/U/T/M | School type Govt/Aided/ un-aided | Student contact Number |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

- ನಾಮಯಾದಿಯ ಕೊನೆಯಲ್ಲಿ ಘೋಷ್ವಾರೆ ಕಡ್ಡಾಯ.

## <u>ಘೋಷ್ವಾರೆ</u>
(ನಾಮಯಾದಿ ಕೊನೆಯಲ್ಲಿ ಕಡ್ಡಾಯವಾಗಿ ನಮೂದಿಸಬೇಕು)

| ಪರೀಕ್ಷೆ | ಪರೀಕ್ಷೆಗೆ ನೊಂದಾಯಿಸಿದ ವಿದ್ಯಾರ್ಥಿಗಳ ಮಾಧ್ಯಮವಾರು ವಿವರ | | | | | | ನೊಂದಾಯಿಸಿದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ವಿದ್ಯಾರ್ಥಿಗಳ ವರ್ಗವಾರು ವಿವರ | | | | |
|---|---|---|---|---|---|---|---|---|---|---|---|---|
| | ಕನ್ನಡ | ಆಂಗ್ಲ | ಉರ್ದು | ಮರಾಠಿ | ತೆಲುಗು | ತಮಿಳು | | ಎಸ್.ಸಿ. | ಎಸ್.ಟಿ. | ಸಾಮಾನ್ಯ | ಇತರೆ | ಒಟ್ಟು |
| **NTSE** | | | | | | | | | | | | |
| **NMMS** | | | | | | | | | | | | |